ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕೆಂದು ಹೇಳಿದ್ದರು. ಆ ದೃಷ್ಟಿಯಿಂದಲೇ ರೇಷ್ಮೆ ಗೂಡು ಬೆಲೆ ಯಾವುದೇ ಕಾರಣಕ್ಕೂ 110 ರೂ.ಗಳಿಗಿಂತ ಕಡಿಮಗೆ ಹೋಗಬಾರದು ಎಂದು ಹೇಳಿ ಇವೊತ್ತು 150 ರೂ. ಗಳವರೆಗೂ ನಾವು ಕೊಡುತ್ತಿದ್ದೇವೆ. ಇವೊತ್ತು ಗುಣಮಟ್ಟ ಕೂಡ ಚೆನ್ನಾಗಿರುವುದರಿಂದ ಇಳುವರಿಯಲ್ಲಿ 30 ಕೆ.ಜಿ. ಬೆಳೆಯುತ್ತಿದ್ದವರು ಇಂದು 60 ಕೆ.ಜಿ. ಬೆಳೆಯನ್ನು ತೆಗೆಯುವ ಮಟ್ಟಕ್ಕೆ ಹೋಗಿದ್ದಾರೆ. ಇವೊತ್ತು ಗೂಡು 14 ಮೆಟ್ರಿಕ್ ಟನ್‌ನಷ್ಟು ಜಾಸ್ತಿಯಾಗಿದೆ. ಆ ದೃಷ್ಟಿಯಿಂದಲೇ ಇನ್ನು ಮೇಲೆ ಈ ಇಂಡಸ್ಟ್ರೀಗೆ ಇನ್ನು ಹೆಚ್ಚಿನ ಉತ್ತೇಜನ ಕೊಡುವ ಸಲುವಾಗಿ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಈ ಹಿಂದೆ ಏನು ಗುರಿ ಇಟ್ಟುಕೊಂಡಿದ್ದೇವೋ ಆ ಗುರಿಗಿಂತ ಇನ್ನು ಹೆಚ್ಚಿನ ರೀತಿಯಲ್ಲಿ ಈ ಇಲಾಖೆಯಲ್ಲಿ ಕೆಲಸ ನಡೆದಿದೆ ಮತ್ತು ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಈ ರೋಗಗಳು ತಗುಲಿ ಇಡೀ ಬೆಳೆ ನಾಶವಾಗುತ್ತಿದೆ. ಆದಕಾರಣ ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಅಲ್ಲಿಗೆ ಅಧಿಕಾರಿಗಳ ತಂಡವನ್ನು ಕಳುಹಿಸಿ ಅಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ ಎಂದು ವರದಿ ತರಿಸಿಕೊಳ್ಳುವುದಕ್ಕಾಗಿ ಅಧಿಕಾರಿಗಳ ತಂಡವನ್ನು ಅಲ್ಲಿಗೆ ಕಳುಹಿಸುತ್ತೀರ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಂ. ವರದೇಗೌಡ : ಮಾನ್ಯ ಉಪಾಧ್ಯಕ್ಷರೇ, ಅಲ್ಲಿಗೆ ಅಧಿಕಾರಿಗಳ ತಂಡವನ್ನು ಕಳುಹಿಸಿ ವರದಿ ತರಿಸಿಕೊಂಡು ಶೀಘ್ರವಾಗಿ ಕೆಲಸ ಮಾಡಿಸಲಾಗುವುದು. ಇನ್ನು ಪುಟ್ಟಣ್ಣಯ್ಯನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳುತ್ತಿದ್ದೇನೆ, ಇಂದು ಖಾಸಗಿ ಗ್ರೈನೇಜ್‌ಗಳು 118 ಮತ್ತು ಸರ್ಕಾರಿ ಗ್ರೈನೇಜ್‌ಗಳು 95 ಇದ್ದು ನಾವು 20 ಕೋಟಿಯಷ್ಟು ಮೊಟ್ಟೆಯನ್ನು ತಯಾರು ಮಾಡುತ್ತಿದ್ದೇವೆ. ಇದರಲ್ಲಿ ಸರ್ಕಾರಿ ಶೇಕಡ 30 ಮತ್ತು ಖಾಸಗಿ ವಲಯ ಶೇಕಡ 70ರಷ್ಟು ತಯಾರು ಮಾಡುತ್ತದೆ.

ಬಗರ್ ಹುಕುಂ ಸಾಗುವಳಿದಾರರ ಅರ್ಜಿ ಅವಧಿ ವಿಸ್ತರಣೆ

165 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಗರ್‌ಹುಕುಂ ಸಾಗುವಳಿದಾರರ ಅರ್ಜಿ ಸ್ವೀಕಾರದ ಸಮಯವನ್ನು (ಈ ಹಿಂದೆ ನಿಗಧಿಗೊಳಿಸಿದ ಸಮಯದಲ್ಲಿ ನೀಡಿದ ಅರ್ಜಿದಾರರಿಗೆ) ವಿಸ್ತರಿಸಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಈ ಹಿಂದೆ ಕಂದಾಯ ಸಚಿವರಾಗಿದ್ದ ಮಾನ್ಯ ಶ್ರೀ ಜಗಜಿಣಗಿಯವರು ಈಪ್ರಶ್ನೆಗೆ ಇದೇ ಉತ್ತರವನ್ನು ಕೊಟ್ಟಿದ್ದರು. ಇದು ವಿಧಾನಸೌಧದಿಂದ ಬರತಕ್ಕಂಥ ಭಾಷೆ. ಏನೆಂದರೆ 'ಪರಿಶೀಲಿಸಲಾಗುವುದು'. ಮಾನ್ಯ ಉಪಾಧ್ಯಕ್ಷರೇ, ಇದೊಂದು

ಪ್ರಮುಖವಾದ ಪ್ರಶ್ನೆಯಾಗಿದ್ದು ಸಣ್ಣ ಹಾಗೂ ಅತಿ ಸಣ್ಣ ರೈತರ ಹಿತದೃಷ್ಟಿಯಿಂದ 1991ರಲ್ಲಿ ವೀರಪ್ಪಮೊಯ್ಲಿಯವರು ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಂಥ ಅವಕಾಶವಿದಾಗಿದೆ. ಕಾರಣಾಂತರಗಳಿಂದ ಆ ಅವಕಾಶದಿಂದ ವಂಚಿತರಾಗಿರುವ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಈ ಅವಕಾಶವನ್ನು ವಿಸ್ತರಿಸುವುದರಿಂದ ಈ ಅನುಕೂಲ ಅವರಿಗಾಗುತ್ತದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಮಾನ್ಯ ಕಂದಾಯ ಸಚಿವರಾಗಿರುವವರೂ ಕೂಡ ಮಳಮಳ್ಳಿ ತಾಲ್ಲೂಕಿನಲ್ಲಿ ಜಮೀನು ಸಕ್ರಮಗೊಳಿಸುವ ಸಮಿತಿಯ ಅಧ್ಯಕ್ಷರಾಗಿದ್ದವರೇ ಆಗಿದ್ದಾರೆ. ಈಗ ನಾಲ್ಕು ತಲೆಮಾರಿನಿಂದ ಬಂದಂಥ ಆ ಒಂದು ಪ್ರದೇಶದ ಯಾವ ಚೌಕಟ್ಟಿನಲ್ಲಿ ಈ ಕಡತಗಳನ್ನು ವಿಲೇವಾರಿ ಮಾಡುವುದಕ್ಕಾಗಿ ಆಗ ಆ ಭಾಗದ ಶಾಸಕರುಗಳನ್ನೊಳಗೊಂಡಂತೆ ಏನು ಸಮಿತಿಯನ್ನು ಮಾಡಿದ್ದೀರೋ ಅದಕ್ಕೆ ಅಧಿಕಾರವನ್ನು ಕೊಡಲಾಗಿದೆಯೋ ಇದಕ್ಕಾಗಿ ಅವಧಿಯನ್ನು ವಿಸ್ತರಿಸುವುದರಿಂದ ಆ ಕಾನೂನು ಚೌಕಟ್ಟಿನೊಳಗೆ ಇದನ್ನು ಪರಿಶೀಲಿಸುವುದಕ್ಕೆ ಅನುಕೂಲವಾಗುತ್ತದೆ. ಹಾಗೆ ಮಾಡದಿದ್ದರೆ ತಂದೆ ಸತ್ತ ಮೇಲೆ ಮಗ, ಮಗ ಸತ್ತಮೇಲೆ ಅವನ ಮಗ ಹೀಗೆ ತಾತ್ಕಾಲಿಕವಾದ ಹಕ್ಕು ಅವರಿಗೆ ಆ ಪ್ರದೇಶದ ಮೇಲೆ ಬರುತ್ತದೆ ವಿನಃ ಶಾಶ್ವತವಾದ ಹಕ್ಕು ಆ ಪ್ರದೇಶದ ಮೇಲೆ ಬರುವುದಿಲ್ಲ. ಆದುದರಿಂದ ಇದೊಂದು ಪ್ರಮುಖ ಪ್ರಶ್ನೆಯಾಗಿರುವುದಿಂದ ನೀವು ಕಾಲವನ್ನು ವಿಸ್ತರಿಸಬೇಕು. ಹಾಗೆ ನೀವೇನಾದರೂ ಅವಕಾಶವನ್ನು ಕೊಟ್ಟು ನಿಗದಿಯನ್ನು ಪಡಿಸಿದರೆ ಇನ್ನೊಂದು ಕಡೆ ಯೋಚನೆ ಮಾಡಬೇಕೆಂದರೆ ಫ್ಲಡ್‌ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ. ಏಕೆಂದರೆ ನಿಮ್ಮ ರೆವಿನ್ಯೂ ಅಥಾರಿಟಿಸ್ ರೆಕಾರ್ಡ್‌ಗಳನ್ನು ಕ್ರಿಯೇಟ್ ಮಾಡುವುದರಲ್ಲಿ ಎಷ್ಟರಮಟ್ಟಿಗೆ ಇದ್ದಾರೆ ಎಂಬುದೂ ತಮ್ಮ ಗಮನಕ್ಕೆ ಬರುತ್ತದೆ. ಆದರೆ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ಸ್ಥಳೀಯವಾಗಿ ಸ್ಥಳಪರಿಶೀಲನೆಯನ್ನು ಮಾಡಿ ಆ ರೈತರಿಗೆ ದಕ್ಕತಕ್ಕಂಥ ಪ್ರದೇಶವನ್ನು ನೀವು ಮಾಡಿಸಿಕೊಟ್ಟರೆ ರೈತರು ನಿಮ್ಮನ್ನು ಶಾಶ್ವತವಾಗಿ ನಿಮ್ಮನ್ನು ನೆನಸಿಕೊಳ್ಳುತ್ತಾರೆಯಾದ ಕಾರಣ ಈ ಅವಕಾಶವನ್ನು ವಿಸ್ತರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಈ ಸಮಸ್ಯೆ ಕೇವಲ ಕೆರೆಗೋಡಿಗೆ ಮಾತ್ರ ಸಂಬಂಧಪಟ್ಟಿಲ್ಲ. ಇದು ಇಡೀ ರಾಜ್ಯದಲ್ಲಿ ಸಮಸ್ಯೆಯಾಗಿ ಪರಿಣಮಿಸಿದೆ. ಈ ರೀತಿಯಲ್ಲಿ ಯಾವ ಬಡವರು ಮತ್ತು ಅತಿ ಸಣ್ಣ ಹಿಡುವಳಿದಾರರು ಸರ್ಕಾರಿ ಜಮೀನನ್ನು ಇಟ್ಟುಕೊಂಡು ವ್ಯವಸಾಯವನ್ನು ಮಾಡುತ್ತಿದ್ದರೋ ಅಂಥವರ ಹೆಸರಿಗೆ ಖಾತೆಯಾಗಲಿಲ್ಲ. ಇಂಥವರಿಗಾಗಿ 1991ರಲ್ಲಿ, 'ಲ್ಯಾಂಡ್ ರಿಫಾರ್ಮ್ಸ್ ಆಕ್ಟ್' ಪ್ರಕಾರ ಫಾರ್ಮ್ ನಂಬರ್ 50ರಲ್ಲಿ ಅರ್ಜಿ ಸಲ್ಲಿಸಿ ಸಕ್ರಮಗೊಳಿಸಿಕೊಳ್ಳಬಹುದೆಂದು ಒಂದು ಅವಕಾಶವನ್ನು ಕೊಡಲಾಗಿತ್ತು. 6 ತಿಂಗಳ ಒಳಗಾಗಿ ಅಂದರೆ 19-9-91ರೊಳಗಾಗಿ ಅರ್ಜಿಯನ್ನು ಸಲ್ಲಿಸಿ ಅವರವರ ಜಮೀನನ್ನು ಅವರವರ ಹೆಸರಿಗೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿತ್ತು. ಆ ದಿನಗಳಲ್ಲಿ ಸುಮಾರು 25 ಲಕ್ಷ 80 ಸಾವಿರ ಎಕರೆ ಜಮೀನನ್ನು ಸಕ್ರಮಗೊಳಿಸಬೇಕಾಗಿದ್ದರಿಂದ 10 ಲಕ್ಷದ 86 ಸಾವಿರ ಅರ್ಜಿಗಳು ಸ್ವೀಕಾರ ಆಗಿತ್ತು. ಅವುಗಳ ಪೈಕಿ 16½ ಲಕ್ಷ ಎಕರೆ ವಿಸ್ತೀರ್ಣವುಳ್ಳ ಜಮೀನಿನಲ್ಲಿ ಸುಮಾರು 7½ ಲಕ್ಷ ಅರ್ಜಿಗಳು ವಿಲೇವಾರಿಯಾಗಿವೆ. ಇನ್ನು ಕೆಲವು ವಿಲೇವಾರಿಯಾಗಿಲ್ಲ. ಇನ್ನು ಕೆಲವರು ಬಡವರು, ಅನಕ್ಷರಸ್ಥರು ಏನಿದ್ದಾರೆ ಅವರಿಗೆ ಸರ್ಕಾರದ ಜಮೀನಿನಲ್ಲಿ ವ್ಯವಸಾಯವನ್ನು

ಮಾಡುತ್ತಿದ್ದಾರೆ. ಅಂಥವರಿಗೆ ಸಹಾಯ ಮಾಡತಕ್ಕಂಥ ವಿಚಾರ ಇದೆ. ಇದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಇದನ್ನು ಮಾಡಬೇಕಾದರೆ ಮಾನ್ಯ ಶಿವಕುಮಾರ್‌ರವರು ಹೇಳಿದ ಹಾಗೆ ದೊಡ್ಡ ದೊಡ್ಡ ರೈತರಿಗೆ ಮತ್ತು ಪ್ಲಾಂಟೇಷನ್ ಇಟ್ಟುಕೊಂಡಿರುವವರಿಗೆ ಅನುಕೂಲವಾಗುವ ಹಾಗೆ ಮಾಡಬಾರದು. ನಿಜವಾಗಿಯೂ ಯಾರು ಎರಡ್ಮೂರು ವರ್ಷಗಳ ಹಿಂದೆ ಸರ್ಕಾರಿ ಜಮೀನಿನಲ್ಲಿ ಸಣ್ಣ ಹಾಗೂ ಅತಿ ಸಣ್ಣ ಹಿಡುವಳಿದಾರರು ಯಾರು ವ್ಯವಸಾಯವನ್ನು ಮಾಡುತ್ತಿದ್ದಾರೋ ಅಂಥವರ ಬಗ್ಗೆ ಪರಿಶೀಲನೆ ಮಾಡಿ ಮತ್ತು ಸ್ಥಳ ಪರಿಶೀಲನೆ ಮಾಡಿ ಅಂಥವರ ಜಮೀನನ್ನು ಸಕ್ರಮಗೊಳಿಸುವುದಕ್ಕೆ ಫಾರ್ಮ್ ನಂಬರ್ 50ನ್ನು ಹಾಕುವ ಅವಧಿಯನ್ನು ವಿಸ್ತರಣೆ ಮಾಡುವ ಸಲುವಾಗಿ ಕಾನೂನು ತಿದ್ದುಪಡಿಯನ್ನು ಈ ಅಧಿವೇಶನದಲ್ಲಿ ತರಬೇಕೆಂದಿದ್ದೇವೆ. ಅದನ್ನು ಈ ಅಧಿವೇಶನದಲ್ಲಿಯೇ ತಂದು ಸಣ್ಣ ರೈತರಿಗೆ ಅನುಕೂಲ ಮಾಡುವ ಸಲುವಾಗಿ ಅವಧಿಯನ್ನು ವಿಸ್ತರಿಸಿ ಸರ್ಕಾರ ಸಹಾಯ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೇ, ಒಳ್ಳೆಯ ಉತ್ತರ ಕೊಟ್ಟ ಮಾನ್ಯ ಸಚಿವರನ್ನು ಮೊಟ್ಟ ಮೊದಲನೆಯದಾಗಿ ಅಭಿನಂದಿಸುತ್ತೇನೆ. ಆದರೆ ಅವರು ಒಂದು ಕಂಡೀಷನ್ ಹಾಕಿ ಹಳ್ಳಿಗಳಲ್ಲಿ ಪೂಜಾರ್‌ಗಳಿಗೆ ಮುಜರಾಯಿ ಜಮೀನು ಹಂಚುವಾಗ ಈ ಕಂಡೀಷನ್ ಹಾಕಿಲ್ಲ. ದರಖಾಸ್ತಿನಲ್ಲಿ ಈ ಕಂಡೀಷನ್ ಇಲ್ಲ. ಅಕ್ರಮ ಸಕ್ರಮಗೊಳಿಸುವ ಕಾರ್ಯದಲ್ಲಿ ಅಲ್ಲಿ ಅಧ್ಯಕ್ಷರಾಗಿ ನಾವು ಕೆಲಸ ಮಾಡುವಾಗ ಕೆಲವು ನ್ಯೂನತೆಗಳು ಅಲ್ಲಿ ಕಂಡುಬಂದವು. ಅದೇನೆಂದರೆ ಅವರು 10 ಗುಂಟೆಯೋ ಅಥವಾ 20 ಗುಂಟೆಯೋ ಜಮೀನು ಇದ್ದು ಅವನು ಈಗಾಗಲೇ 2 ಎಕರೆ ಪ್ರದೇಶವನ್ನು ಆಕ್ರಮಿಸಿಕೊಂಡು ವ್ಯವಸಾಯವನ್ನು ಮಾಡಿಕೊಂಡು ಆತ ಈಗಾಗಲೇ ಫಾರ್ಮ್ ನಂಬರ್ 50 ಅನ್ನೂ ಕೂಡ ಹಾಕಿದ್ದಾನೆ. ಆದರೆ ನಾವು ಹಂಚುವಾಗ ಇಂತಿಷ್ಟು ಜಮೀನನ್ನು ಇವನ ಖಾತೆಯಲ್ಲಿ ಇವನ ತಂದೆಯ ಖಾತೆಯಲ್ಲಿ ಕಡಿಮೆ ಮಾಡಿಕೊಡಬೇಕು ಎಂದು ಕಂಡೀಷನ್ ಹಾಕಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಅವರ ಪೊಸಿಷನ್‌ನಲ್ಲಿ ಎಷ್ಟು ಎಕರೆ ಜಮೀನಿರುತ್ತದೋ ಅಷ್ಟನ್ನೂ ಸಕ್ರಮಗೊಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : 4 ಎಕರೆ 30 ಗುಂಟೆಗಿಂತ ಜಮೀನು ಮೀರಿರಬಾರದು ಎಂದು ಕಂಡೀಷನ್ ಹಾಕಿರುವುದೇ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಅನುಕೂಲವಾಗಲಿ ಎಂಬುದಾಗಿದೆ. ಈಗ ತಾವು ನಮಗೆ ಶಾಸನ ಮಾಡಬೇಕೆಂದು ಹೇಳಿದ್ದೀರಿ. ಇದು ಸ್ವಾಗತಾರ್ಹವಾದ ಕ್ರಮ. ಇದನ್ನು ತೆಗೆದುಕೊಂಡು ಬಂದರೆ ಇದಕ್ಕೆ ಯಾರೂ ಕೂಡ ಅಡ್ಡಿ ಮಾಡುವುದಿಲ್ಲ. ಏಕೆಂದರೆ ಪೂರ್ಣ ಪ್ರಮಾಣದಲ್ಲಿ ಅವರ ಕ್ಷೇತ್ರದಲ್ಲಿ ಬರತಕ್ಕಂಥ ರೈತರಿಗೆ ನೀವು ನ್ಯಾಯ ದೊರಕಿಸಿಕೊಟ್ಟ ಹಾಗಾಗುತ್ತದೆ. ಇದನ್ನು ನಿಮ್ಮ ಕಾನೂನಿನ ಚೌಕಟ್ಟಿನಲ್ಲಿಯೇ ನೀವು ಮಾಡಬಹುದು. ಆದುದರಿಂದ ನೀವು ಶಾಸನವನ್ನು ಮಾಡುವುದರಿಂದ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಸೇಂದಿವನವನ್ನು ಈ ವ್ಯಾಪ್ತಿಗೆ ತೆಗೆದುಕೊಂಡು ಬನ್ನಿ ಎಂದು ಬಹಳ ಸಲ ಕೇಳಿಕೊಂಡು ಬಂದಿದ್ದೇವೆ. ಇದರಲ್ಲಿ ಈಗಾಗಲೇ ಕಲ್ಪಿವೇಷನ್ ಆಗಿಬಿಟ್ಟಿದೆ. ಎಲ್ಲೂ

ಕೂಡ ಈಚಲು ಗಿಡ ಇಲ್ಲವೇ ಇಲ್ಲ. ಒಂದೊಂದು ಕ್ಷೇತ್ರದಲ್ಲೂ ಹತ್ತನ್ನೆರಡು ಸಾವಿರ ಎಕರೆ ಸೇಂದಿ ವನ ಯಾವುದೇ ಕ್ರಮಕ್ಕೂ ಒಳಪಡದೇ ಹಾಗೆ ಉಳಿದುಬಿಟ್ಟಿದೆ. ದಯಮಾಡಿ ಈಗಲಾದರೂ ಆ ಸೇಂದಿವನವನ್ನು ಅದರ ವ್ಯಾಪ್ತಿಯಲ್ಲಿ ತಂದು ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಡಲಿಕ್ಕೆ ಕಾನೂನಿನ ತಿದ್ದುಪಡಿಯನ್ನು ತರಬೇಕು.

12.00 ಪಿ.ಎಂ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಈಗ ಅರ್ಜಿ ಸಲ್ಲಿಸುವುದಕ್ಕೆ ಸಮಯಾವಕಾಶ ಕೊಡುವುದು ಒಂದು ಕಡೆ. ಇನ್ನೊಂದು ತಾಂತ್ರಿಕ ದೋಷವಿದೆ. ಏನೆಂದರೆ ಈಗ ಅರ್ಜಿ ಕೊಟ್ಟಿದ್ದಾರೆ, ಎಂಡಾರ್ಸ್‌ಮೆಂಟ್ ಕೂಡ ಇದೆ. ಆದರೆ ಅದು ಅರ್ಜಿ ಕೊಟ್ಟಿರುವುದು ರಿಜಿಸ್ಟರ್‌ನಲ್ಲಿ ಎಂಟ್ರಿಯಾಗಿಲ್ಲ ಎನ್ನುವ ಒಂದು ತಾಂತ್ರಿಕ ದೋಷಕ್ಕೆ ನಾವು ಅರ್ಜಿಗಳನ್ನು ಪರಿಗಣಿಸುವುದಕ್ಕೆ ಆಗುತ್ತಿಲ್ಲ. ಅದನ್ನೂ ಕೂಡ ಮಾನ್ಯ ಸಚಿವರು ಗಮನಿಸಬೇಕು. ಅದರ ಬಗ್ಗೆ ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು, ಯಾರು ಅರ್ಜಿ ಕೊಟ್ಟಿದ್ದಾರೆ, ಯಾವುದು ಎಂಟ್ರಿ ಆಗಿಲ್ಲ ಅಂತಹವರಿಗೆ ಅವಕಾಶ ಕೊಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಕೊಡಬೇಕು.

(ಗೊಂದಲ)

ಮಾನ್ಯ ಸದಸ್ಯರು : ಕಂಡೀಷನ್ ಮತ್ತು ಎಕ್ಸಸ್ ಲ್ಯಾಂಡ್ ಬಗ್ಗೆ ಹೇಳಲಿಲ್ಲ.

ಉಪಾಧ್ಯಕ್ಷರು : ಕುಳಿತುಕೊಳ್ಳಿ. ಇದು ಸರಿಯಲ್ಲ ನೀವು ಮಾಡುತ್ತಿರುವುದು. ಎಲ್ಲರೂ ಇಂಟರ್‌ಫಿಯರ್ ಮಾಡಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಕೆಲವು ಅರ್ಜಿ ಸಲ್ಲಿಸಿದ್ದರೂ ಅಂತಹವರಿಗೆ ತಾಂತ್ರಿಕ ಕಾರಣಗಳಿಂದ ಅದನ್ನು ರಿಜೆಕ್ಟ್ ಮಾಡಿರಬಹುದು. ನಾನು ಆಗಲೇ ಹೇಳಿದ್ದೇನೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಅವರೇ ಸ್ಥಳ ಪರಿಶೀಲನೆ ಮಾಡಿ, ನಿಜವಾಗಿ ಯಾರ ಸ್ವಾಧೀನದಲ್ಲಿ ಕೆಲಸ ಮಾಡುತ್ತಿದ್ದಾರೆ, ಅಂಥವರನ್ನು ಅವರೇ ಸ್ಯಾಟಿಸ್‌ಫೈ ಮಾಡಿದಮೇಲೆ ಅಂತಹವರಿಗೆ ಸಕ್ರಮ ಮಾಡತಕ್ಕಂಥ ಅವಕಾಶ ತರತಕ್ಕಂಥ ಈ ಒಂದು ಬಿಲ್‌ನಲ್ಲಿ ಇದೆ. ಅದನ್ನು ನಾವು ಈಗ ಸಧ್ಯಕ್ಕೆ 2 ಎಕರೆ ಹೊಂದಿರತಕ್ಕಂಥ ಬಡವರು ಮತ್ತು ಸಣ್ಣ ಹಿಡುವಳಿದಾರರು ಯಾರಿದ್ದಾರೆ ಅವರಿಗೆ ಮಾಡೋಣ. ಎಕ್ಸೆಸ್ ಲ್ಯಾಂಡ್ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ವಿಧಾನ ಸಭಾ ವಿಟ್ಲ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ

166 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಟ್ಲ ವಿಧಾನಸಬಾ ಕ್ಷೇತ್ರದಲ್ಲಿ ಮಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಗಳು ಎಷ್ಟು? (ವಿವರ ನೀಡುವುದು)*